ಅಶ್ವತ್ಥನಾರಾಯಣಗೌಡ
ಆಡಳಿತ ಪಕ್ಷದ ನಾಯಕರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Ashwathnarayanagowda
Ruling Party Leader
Bruhat Bangalore Mahanagara Palike

ಅಧ್ಯಕ್ಷರು
ವಾರ್ಡ್‌ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಗೆ,

ಮಾನ್ಯ ಅಧ್ಯಕ್ಷರು,
ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

ಮಾನ್ಯರೇ,

ಬ್ಯಾಟರಾಯನಪುರ ವಿಧಾನ ಸಭಾ ಕ್ಷೇತ್ರದ ವಾರ್ಡ್‌ಸಂಖ್ಯೆ:8 ರಲ್ಲಿ ಕೆಲವೊಂದು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿದ್ದು, ಪ್ರಸ್ತಾಪಿತ ಕಾಮಗಾರಿಯು ಅತಿ ಜರೂರು ಹಾಗೂ ತುರ್ತಾಗಿ ಕೈಗೊಳ್ಳಬೇಕಾಗಿದ್ದು, ಅನುಮೋದನೆಗಾಗಿ ತಮ್ಮ ಸ್ಥಾಯಿ ಸಮಿತಿಗೆ ಆಯುಕ್ತರು ಕಡತ ಮಂಡಿಸಿರುವುದು ತಿಳಿದುಬಂದಿದೆ. ಸದರಿ ಕಡತವನ್ನು ದಿನಾಂಕ:28/02/2014ರಂದು ನಡೆಯಲಿರುವ ಸಭೆಗೆ ವಿಷಯದ ಸಂಖ್ಯೆ: ವಿಷಯದ ಸಂಖ್ಯೆ:338/2013–14, ರಲ್ಲಿ ತಮ್ಮ ಸಮಿತಿಯಲ್ಲಿ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಪ್ರಸ್ತಾಪಿತ ಕಾಮಗಾರಿಯನ್ನು ಈ ಆರ್ಥಿಕ ವರ್ಷ ಮುಕ್ತಾಯವಾಗುವ ಮೊದಲು ಹಾಗೂ ಮಳೆಗಾಲ ಪ್ರಾರಭವಾಗುವ ಮುನ್ನ ಕಾಮಗಾರಿ ಮುಗಿಸಬೇಕಾಗಿದ್ದು, ತುರ್ತಾಗಿ ಸದರಿ ಕಾಮಗಾರಿಗಳನ್ನು ನಿರ್ವಹಿಸಬೇಕಾಗಿರುವ ಹಿನ್ನೆಲೆಯಲ್ಲಿ ಸರ್ಕಾರಿ ಸ್ವಾಮ್ಯದ ಕೆ.ಆರ್.ಐ.ಡಿ.ಎಲ್ ವತಿಯಿಂದ ಕೈಗೊಳ್ಳಲು ಅನುಮೋದನೆ ನೀಡಬೇಕೆಂದು ತಮ್ಮನ್ನು ಕೋರುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಅಶ್ವತ್ಥನಾರಾಯಣಗೌಡ)

ಕಛೇರಿ : ವಾರ್ಡ್ ನಂ.8, ಕಛೇರಿ ಕಾರ್ಯಲಯ, ಕೊಡಿಗೇಹಳ್ಳಿ ಮುಖ್ಯರಸ್ತೆ, ಸಹಕಾರನಗರ, ಬೆಂಗಳೂರು–560 092
ಕಛೇರಿ : 080–22975503, 23628199, ಮೊಬೈಲ್ : 9448078232, E-mail : ashwathnarayanagowda@gmail.com

6)

ಬಿ.ಎಸ್. ಸತ್ಯನಾರಾಯಣ (ಕಟ್ಟೆ ಸತ್ಯ)
ಮಹಾಪೌರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಎಂಪಿಎಸ್/ಪಿಆರ್/ಮ.ವಿ.ಕಾ/ 99/2013-14. ದಿನಾಂಕ: 06/02/2014.

ಟಿಪ್ಪಣಿ

ಶ್ರೀ. ಅಶ್ವತ್ಥನಾರಾಯಣ ಗೌಡ, ಸದಸ್ಯರು, ವಾರ್ಡ್-08, ಕೊಡಿಗೆಹಳ್ಳಿ ರವರು ಸಲ್ಲಿಸಿರುವ ಮನವಿಯನ್ನು ಲಗತ್ತಿಸಲಾಗಿದ್ದು, ಸದರಿ ವಾರ್ಡ್ ವ್ಯಾಪ್ತಿಯಲ್ಲಿ ಅಗತ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಮಹಾಪೌರರ ಅನುದಾನವನ್ನು ಕೋರಿದ್ದು, ಈ ಮೇರೆಗೆ ಆಯವ್ಯಯ ಲೆಕ್ಕ ಶೀರ್ಷಿಕೆ ಪಿ೦೧೨೦-ಪೂಜ್ಯ ಮಹಾಪೌರರು ಆಜ್ಞೆ ಮಾಡುವ ವಿಶೇಷ ಕಾಮಗಾರಿಗಳು ಅಡಿಯಲ್ಲಿ ರೂ. 200.00 ಲಕ್ಷಗಳ (ರೂ. ಇನ್ನೂರು ಲಕ್ಷಗಳು ಮಾತ್ರ) ಅನುದಾನವನ್ನು ಮೇಲ್ಕಂಡ ವಾರ್ಡ್‌ನ ಅಭಿವೃದ್ಧಿ ಕಾಮಗಾರಿಗಳಿಗೆ ಮಂಜೂರು ಮಾಡಲಾಗಿದೆ. ಸಾರ್ವಜನಿಕ ಹಿತದೃಷ್ಟಿಯಿಂದ ಈ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ ಕೆ.ಆರ್.ಐ.ಡಿ.ಎಲ್ ಸಂಸ್ಥೆ ವತಿಯಿಂದ ನಿರ್ವಹಿಸಲು ನಿಯಮಾನುಸಾರ ಕ್ರಮ ಕೈಗೊಂಡು ಕಾಮಗಾರಿ ಅನುಷ್ಠಾನಗೊಳಿಸಲು ಸಂಬಂಧಪಟ್ಟವರಿಗೆ ಸೂಚಿಸತಕ್ಕದ್ದು.

ಮಹಾಪೌರರು

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ನರಸಿಂಹರಾಜ ವೃತ್ತ, ಬೆಂಗಳೂರು – 560 002
ಕಛೇರಿ : 080-22238540, 22248366, 22975501, ಫ್ಯಾಕ್ಸ್ : 080-22237457, ಮೊ. : 9341220836
E-mail : mayorbangalore@gmail.com Katte Sathya / Face Book

ಾರಾಯಣಗೌಡ
ಕ್ಷದ ನಾಯಕರು,
ಬೆಂಗಳೂರು ಮಹಾನಗರ ಪಾಲಿಕೆ

Ashwathnarayanagowda
Ruling Party Leader
Bruhat Bangalore Mahanagara Palike

ದಿನಾಂಕ: 08-01-2014

ಪೂಜ್ಯ ಮಹಾಪೌರರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

ಮಾನ್ಯರೆ,

ವಿಷಯ: ವಾರ್ಡ್ 08, ಕೊಡಿಗೆಹಳ್ಳಿ ವಾರ್ಡಿನ ವ್ಯಾಪ್ತಿಯಲ್ಲಿನ ಅಭಿವೃದ್ಧಿ ಕಾಮಗಾರಿಗಳಿಗೆ ಪೂಜ್ಯ ಮಹಾಪೌರರ ನಿಧಿಯಿಂದ ಅನುಧಾನವನ್ನು ಮಂಜೂರು ಮಾಡುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಾರ್ಡ್ 08, ಕೊಡಿಗೆಹಳ್ಳಿ ವಾರ್ಡಿನ ವ್ಯಾಪ್ತಿಯಲ್ಲಿನ ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು 2013-14ನೇ ಸಾಲಿನ ಪೂಜ್ಯ ಮಹಾಪೌರರ ನಿಧಿಯಿಂದ ಅನುದಾನವನ್ನು ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಕ್ರ. ಸಂ.	ಕಾಮಗಾರಿ ವಿವರ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
1	ಕೊಡಿಗೆಹಳ್ಳಿ ಗ್ರಾಮ ಮತ್ತು ಕೊಡಿಗೆಹಳ್ಳಿ ಬಡಾವಣೆಯಲ್ಲಿನ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ	50.00
2	ಅಮ್ಮೋ ಬಡಾವಣೆ, ಹೆಬ್ಬಾಳ ಸರೋವರ, ಬಾಲಾಜಿ ಬಡಾವಣೆಯಲ್ಲಿನ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ	50.00
3	ದೇವಿನಗರ, ಮುನೇಶ್ವರ ಬ್ಲಾಕ್. ಟಾಟಾ ನಗರ, ಕಣ್ಣೂರಮ್ಮ ಬಡಾವಣೆಯಲ್ಲಿನ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ	50.00
4	ಮಾರುತಿನಗರ, ಬಿ.ಬಿ. ಬಡಾವಣೆ, ಭದ್ರಪ್ಪ ಬಡಾವಣೆಯಲ್ಲಿನ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ	50.00
5	ಶಾಲಾ ಕೊಠಡಿಗಳ ನಿರ್ಮಾಣ. ಕಾಮಗಾರಿ	100.00

ವಂದನಗಳೊಂದಿಗೆ,

ತಮ್ಮ ವಿಶ್ವಾಸಿ,

ಕಛೇರಿ : ವಾರ್ಡ್ ನಂ.8, ಕಛೇರಿ ಕಾರ್ಯಲಯ, ಕೊಡಿಗೇಹಳ್ಳಿ ಮುಖ್ಯರಸ್ತೆ, ಸಹಕಾರನಗರ, ಬೆಂಗಳೂರ-560 092
ಕಛೇರಿ : 080-22975503, 23628199, ಮೊಬೈಲ್ : 9448078232, E-mail : ashwathnarayanagowda@gmail.com

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ:28–02–2014ರ ನಡವಳಿಗಳು

ವಿಷಯದ ಸಂಖ್ಯೆ: ವಾಕಾಸ್ಥಾಸ/338/2013–14

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬ್ಯಾಟರಾಯನಪುರ ವಿಧಾನ ಸಭಾ ಕ್ಷೇತ್ರ ವಾರ್ಡ್–08ರ ಕೊಡಿಗೆಹಳ್ಳಿಯಲ್ಲಿ ಈ ಕೆಳಗೆ ನಮೂದಿಸಿರುವ 4 ಕಾಮಗಾರಿಗಳನ್ನು 2013–14ನೇ ಸಾಲಿನಲ್ಲಿ ಕೈಗೆತ್ತಿಕೊಂಡು ನಿರ್ವಹಿಸಲು ಉದ್ದೇಶಿಸಲಾಗಿದೆ. ಸದರಿ ಕಾಮಗಾರಿಗಳನ್ನು ಪೂಜ್ಯ ಮಹಪೌರರು ಅನುದಾದಡಿಯಲ್ಲಿ ನಿರ್ವಹಿಸಲು ಉದ್ದೇಶಿಸಲಾಗಿದೆ. ಈ ಕಾಮಗಾರಿಗಳಿಗೆ ಪೂಜ್ಯ ಮಹಾಪೌರರು ಅವರ ಪತ್ರದ ಸಂಖ್ಯೆ:ಎಂಪಿಎಸ್/ಪಿಎಸ್/ಮಾವಿಕಾ/99/2013–14 ದಿನಾಂಕ:6/2/2014ರಂದು ಅನುದಾನವನ್ನು ಬಿಡುಗಡೆ ಮಾಡಿರುತ್ತಾರೆ ಹಾಗೂ ಸದರಿ ಕಾಮಗಾರಿಗಳನ್ನು ನಿಯಮಾನುಸಾರ ಕೆ.ಆರ್.ಐ.ಡಿ.ಎಲ್ ಮುಖಾಂತರ ನಿರ್ವಹಿಸಲು ಕೂಡ ಸೂಚಿಸಿರುತ್ತಾರೆ. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಗಳನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತುರ್ತಾಗಿ ಕೈಗೊಳ್ಳಬೇಕಾಗಿರುತ್ತದೆ. ಕಾಮಗಾರಿಗಳ ವಿವರ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)
1	**Improvements to roads and drains at Kodigehallil village and Kodigehalli layout in ward No.8 Kodigehalli**	**50.00**
2	**Improvements to roads and drains at Amco layout Hebal sarvor and Balaji layout in ward No.8 Kodigehalli**	**50.00**
3	**Improvements to roads and drains at Devinagara, Munieshwara block, Tatanagara and Knnuramma temple in ward No.8 Kodigehalli**	**50.00**
4	**Improvements to roads and drains at Maruthinagara, BB layout Bhadrappa layout in ward No.8 Kodigehalli**	**50.00**

ಕಾಮಗಾರಿಗಳ ಪಟ್ಟಿಯನ್ನು ಪರಾಮರ್ಶಿಸಿದಾಗ ಈ ಕಾಮಗಾರಿಯು ತುರ್ತು ಎಂದು ಪರಿಗಣಿಸಲು ಕಷ್ಟಸಾಧ್ಯವಾಗಿರುತ್ತದೆ. ಅಲ್ಲದೇ ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಲು ಮುಖ್ಯ ಅಭಿಯಂತರರು, ಜಂಟಿ ಆಯುಕ್ತರು (ಯಲಹಂಕ) ರವರು ಸಮರ್ಥನೀಯವಾದ ಕಾರಣಗಳನ್ನು ನೀಡಿರುವುದಿಲ್ಲ. ಮಂಜೂರಾದ ಹೆಚ್ಚಿನ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್.ಗೆ ವಹಿಸುವ ಬಗ್ಗೆ ಎಲ್ಲಾ ವಲಯಗಳಿಂದ

ಪ್ರಸ್ತಾವನೆ ಸಲ್ಲಿಸಲಾಗುತ್ತಿದೆ. ಆದರೆ, ಈಗಾಗಲೇ ಮೆ॥ ಕೆ.ಆರ್.ಐ.ಡಿ.ಎಲ್.ಗೆ ವಹಿಸಿರುವ ಕಾಮಗಾರಿಗಳನ್ನು ನಿರ್ವಹಿಸುವ ಸಾಮರ್ಥ್ಯದ ಬಗ್ಗೆ ಮಾಹಿತಿ ಇರುವುದಿಲ್ಲ.

ಆದುದರಿಂದ ಮಾನ್ಯ ಆಯುಕ್ತರು ಈ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ವಾರ್ಡ್ ಮಟ್ಟದ ಸಾರ್ವಜನಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲು ಸೂಚಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಸೂಕ್ತ ನಿರ್ಣಯಕ್ಕಾಗಿ ವಾರ್ಡ್ ಮಟ್ಟದ ಸಾರ್ವಜನಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:26/02/2014ರ ಟಿಪ್ಪಣಿ

ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:26/02/2014 ರ ಟಿಪ್ಪಣಿಯನ್ನು ಒಪ್ಪುತ್ತಾ, ಪ್ರಸ್ತಾಪಿತ ಕಾಮಗಾರಿಗಳನ್ನು ಈ ಆರ್ಥಿಕ ವರ್ಷ ಮುಕ್ತಾಯವಾಗುವ ಮೊದಲು ಹಾಗೂ ಮಳೆಗಾಲಕ್ಕೂ ಮುನ್ನ ಪ್ರಾರಂಭ ಮಾಡಬೇಕಾಗಿರುವುದರಿಂದ ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ವತಿಯಿಂದ ನಿರ್ವಹಿಸಲು ಅನುಮೋದನೆ ನೀಡುವಂತೆ ಸ್ಥಳೀಯ ಪಾಲಿಕೆ ಸದಸ್ಯರು ಕೋರಿರುವುದರಿಂದ, ಪ್ರಸ್ತಾಪಿತ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ವತಿಯಿಂದ ನಿರ್ವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.

ಎ.ಹೆಚ್.ಬಸವರಾಜು

ಅಧ್ಯಕ್ಷರು

ವಾರ್ಡ್‌ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ

~~ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.~~

ಕ್ರಮ ಸಂಖ್ಯೆ	ಶ್ರೀಯುತರ ಹೆಸರು	ಪದನಾಮ	ನಿರ್ಣಯದ ಪರವಾಗಿ ಸಹಿ
1	ಎ.ಹೆಚ್.ಬಸವರಾಜು	ಅಧ್ಯಕ್ಷರು	ಎ.ಹೆಚ್.ಬಸವರಾಜು
2	ರಂಗಣ್ಣ. ಕೆ	ಸದಸ್ಯರು	K. Rangamma
3	ಸುಗುಣ ಬಾಲಕೃಷ್ಣ	ಸದಸ್ಯರು	Suguna Balakrishna
4	ತಿಮ್ಮರಾಜು	ಸದಸ್ಯರು	
5	ಸರಸ್ವತಮ್ಮ	ಸದಸ್ಯರು	Saraswathamma
6	ಕೆ. ನಂದಿನಿ ಶ್ರೀನಿವಾಸ್	ಸದಸ್ಯರು	K. Nandini
7	ಆಶಾ ಸುರೇಶ್	ಸದಸ್ಯರು	
8	ಎಸ್.ಕೆ.ಪುಷ್ಪ	ಸದಸ್ಯರು	

9	ಶಾಹಿನ್ ತಾಜ್	ಸದಸ್ಯರು	
10	ಜ್ಯೋತಿಶ್ರೀ ಹರಿರೆಡ್ಡಿ	ಸದಸ್ಯರು	
11	ಅಶ್ವಥ ನಾರಾಯಣ ಜಿ.ಎ	ಸದಸ್ಯರು	